ಪರಿವರ್ತನೆಯಾದ ವ್ಯವಸಾಯ ಜಮೀನುಗಳ ವಿಸ್ತೀರ್ಣ

3515 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವ್ಯವಸಾಯದ ಜಮೀನುಗಳನ್ನು ನವೆಂಬರ್ 90ರಿಂದ ವ್ಯವಸಾಯೇತರ ಉದ್ದೇಶಗಳಿಗೆ ಭೂಪರಿವರ್ತಿಸಿರುವ ಜಮೀನಿನ ವಿಸ್ತೀರ್ಣವೆಷ್ಟು?*

ಆ) *ಪ್ರತಿಯೊಂದು ವ್ಯಕ್ತಿ ಹಾಗೂ ಸಂಸ್ಥೆಯ ಹೆಸರಿನಲ್ಲಿ ಭೂ ಪರಿವರ್ತನೆಗೆ ಮಂಜೂರಾತಿ ನೀಡಿರುವ ಜಮೀನಿನ ವಿಸ್ತೀರ್ಣವೆಷು? (ವಿವರಗಳನ್ನು ನೀಡುವುದು)*

ಇ) *ಮೇಲ್ಕಂಡ ಭೂ ಪರಿವರ್ತನೆ ಮಂಜೂರಾತಿಯಿಂದ ಸರ್ಕಾರಕ್ಕೆ ಬಂದ ಹಣದ ಮೊತ್ತವೆಷ್ಟು?*

ಈ) *ಯಾವ ಉದ್ದೇಶಗಳಿಗೆ ಈ ಭೂ ಪರಿವರ್ತನೆಗೆ ಅನುಮತಿ ನೀಡಲಾಗಿದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆ-481 ಎಕರೆಗಳು $8\frac{1}{2}$ ಗುಂಟೆಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ 618 ಎಕರೆಗಳು $19\frac{1}{2}$

ಆ) ತಾಲ್ಲೂಕುವಾರು ಮಾಹಿತಿಯನ್ನು ಲಗತ್ತಿಸಿದೆ.

ಇ) ಬೆಂಗಳೂರು ನಗರ ಜಿಲ್ಲೆ ರೂ. 83,37,674-00.

ಬೆಂಗಳೂರು ಗ್ರಾಮಾಂತರ ಜಿಲ್ಲೆ ರೂ.28.83,536-00

ಈ) ವಾಸದ ಉಪಯೋಗಕ್ಕಾಗಿ ಕೈಗಾರಿಕಾ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಈ ಪರಿವರ್ತನೆಯನ್ನು ಮಂಜೂರು ಮಾಡಲಾಗಿದೆ.

ಸ್ಟಾಂಪ್ ಡ್ಯೂಟಿಯನ್ನು ಕಡಿಮೆ ಮಾಡುವ ಬಗ್ಗೆ

3516 - ಶ್ರೀ ಪ್ರಭಾಕರ ಎಸ್.ರಾಣೆ (ಕಾರವಾರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜಮೀನು ಮತ್ತು ನಿವೇಶನ ನೋಂದಣಿಗಾಗಿ ಮುದ್ರಾಂಕ ಶುಲ್ಕ ಕಡಿಮೆ ಮಾಡಲು ಕೋರಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಹೆಸರುಗಳು (ಜಿಲ್ಲಾವಾರು ಮಾಹಿತಿ ಒದಗಿಸುವುದು)*

ಆ) *ಅವುಗಳಲ್ಲಿ ಸರ್ಕಾರದಿಂದ ಪರಿಗಣಿಸಲ್ಪಟ್ಟ ಪ್ರಕರಣಗಳೆಷ್ಟು? ಹೆಸರುಗಳೊಂದಿಗೆ?*

ಇ) *ಮೇಲಿನ ಪ್ರಕರಣಗಳಲ್ಲಿ ಮುದ್ರಾಂಕ ಶುಲ್ಕವಿರುವ ನಿನಾಯ್ತಿ ನೀಡಿದ ಮೊತ್ತ ಮತ್ತು ಈ ರಿಯಾಯಿತಿ ನೀಡಲು ಕಾರಣಗಳನ್ನು ಒದಗಿಸುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):